## ಕಣ್ಣು ತೆರೆಸುವ ಲೇಖನ

ಏ. 9ರ ಸಂಚಿಕೆಯಲ್ಲಿ ಕೇಶವ ಕೊರ್ಸೆ ಅವರು ಬರೆದ 'ಕಾನೂನಿನ ಕಣ್ಣಿಗೆ ದೂಳು; ಸಹ್ಯಾದ್ರಿ ಹತ್ತುವುದೆ ರೈಲು?' ಲೇಖನ ತುಂಬ ಚೆನ್ನಾಗಿತ್ತು. ಎಲ್ಲರ ಕಣ್ಣು ತೆರೆಸುವ ಹಾಗೆ ಇತ್ತು. ಪದೇಪದೆ, ಪ್ರಕೃತಿ ವಿಕೋಪದ ಪೆಟ್ಟನ್ನು ತಿನ್ನುತ್ತಲೇ ಇದ್ದೇವೆ. ಆದರೂ ನಾವಿನ್ನೂ ಹಿಂದಿನ ತಪ್ಪುಗಳಿಂದ ಪಾಠ ಕಲಿತಿಲ್ಲ. ದೀಪ ಆರುವಾಗ ತುಂಬಾ ಜೋರಾಗಿ ಉರಿಯುವ ಹಾಗೆ, ನಮ್ಮ ನಾಶ ನಾವೇ ಹತ್ತಿರ ಬಾಚಿಕೊಳ್ಳುವ ತವಕದಲ್ಲಿ ಇದ್ದೇವೆ.

—ರವೀಂದ್ರ ಕುಲಕರ್ಣಿ, ಹಾವೇರಿ

ಪ್ರಸ್ತುತ ಮಾನವ ನಿರ್ಮಿತ ನೈಸರ್ಗಿಕ ಅಪರಾಧಗಳಲ್ಲಿ ಇದೂ ಒಂದು ಎಂದು ನಿಸ್ಸಂಶಯವಾಗಿ ಹೇಳಬಹುದು. ಈ ಲೇಖನ ಆಡಳಿತದಲ್ಲಿರುವವರ ಕಣ್ಣು ತೆರೆಸಬೇಕಾಗಿದೆ. ನಮ್ಮ ಸಹ್ಯಾದ್ರಿಯ ಒಡಲನ್ನು ಸೀಳುವ ಈ ಯೋಜನೆ ಮುಂದೆ ಈ ಪರ್ವತ ಶ್ರೇಣಿಯನ್ನೇ ಛಿದ್ರ ಮಾಡುವ ದಿಸೆಯಲ್ಲಿ ನಾಂದಿ ಹಾಡಲಿದೆ. ಅಷ್ಟಕ್ಕೂ ಈ ಯೋಜನೆ ನಡೆದೇ ತೀರಬೇಕಾದ ಅನಿವಾರ್ಯತೆ ಖಂಡಿತಾ ಇಲ್ಲ. ಯಾವುದೋ ಖಾಸಗಿ ವ್ಯಕ್ತಿಗಳ ಗಣಿಗಾರಿಕೆಗೆ ಅನುಕೂಲ ಮಾಡಿಕೊಡುವ ಹುನ್ನಾರ ಅಡಗಿರುವ ಗುಮಾನಿ ಕಾಡುತ್ತಿದೆ. ಸಹ್ಯಾದ್ರಿ ಪರ್ವತ ಶ್ರೇಣಿಯನ್ನು ಹಾದು ಹೋಗುವ ಯಾವುದೇ ನಿರ್ಮಾಣಕ್ಕೆ



ಸರ್ಕಾರ ತಡೆ ನೀಡಬೇಕಾಗಿರುವ ವಿವೇಚನೆಯುಕ್ತ ನಿರ್ಧಾರವನ್ನು ತೆಗೆದುಕೊಳ್ಳುವುದೇ ಸಮಂಜಸ. ಅದಕ್ಕಾಗಿ ಪರಿಸರ ತಜ್ಞರು ಒತ್ತಾಯಿಸುವ ತುರ್ತು ಅವಶ್ಯಕತೆ ಬಂದೊದಗಿದೆ.

—ಎಸ್. ಜಿ.ರಮೇಶ್, ಶಿವಮೊಗ್ಗ

ಹುಬ್ಬಳ್ಳಿ–ಅಂಕೋಲಾ ರೈಲು ಮಾರ್ಗದ ನಿರ್ಮಾಣದಿಂದ ಉಂಟಾಗುವ ಶಾಶ್ವತ ಪರಿಸರನಾಶವನ್ನು ತಡೆಗಟ್ಟಲು ಹೋರಾಟ ಅನಿವಾರ್ಯವಾಗಿದೆ. ಲಕ್ಷಾಂತರ ಗಿಡ ಮರಗಳನ್ನು ಕಡಿದು, ನೂರಾರು ವನ್ಯಜೀವಿಗಳ ನೆಲೆ ನಾಶಮಾಡಿ, ನೀರಿನ ಸೆಲೆಗಳು ಬತ್ತುವಂತೆ ಮಾಡಿ, ಭವಿಷ್ಯದಲ್ಲಿ ಜನರು ಬರಗಾಲ, ಭೂಕಂಪ, ಪ್ರವಾಹ, ಸಾಂಕ್ರಾಮಿಕ ರೋಗಗಳಿಗೆ ಬಲಿಯಾಗುವಂತೆ ಮಾಡಲು ಸರ್ಕಾರಗಳು ಇಂತಹ ಯೋಜನೆಗಳಿಗೆ ಅನುಮತಿ ನೀಡುವರೇ ಎಂದು ಅನುಮಾನ ಬರುತ್ತಿದೆ. ಇಂತಹ ಯೋಜನೆಗಳಿಗೆ ಅನುಮತಿ ನೀಡುವ ರಾಜಕಾರಣಿಗಳ ಬೌದ್ಧಿಕ ದಿವಾಳಿತನಕ್ಕೆ ಧಿಕ್ಕಾರವಿರಲಿ.

—ಮಹೇಶ್ವರ ಹುರುಕಡ್ಲಿ ಬಾಚಿಗೊಂಡನಹಳ್ಳಿ

ಪ್ರಕೃತಿ, ನೈಸರ್ಗಿಕ ಸಂಪನ್ಮೂಲ, ಪ್ರಾಣಿ ಪಕ್ಷಿಗಳ ನಾಶ ಮಾಡಿ ರೈಲು ಮಾರ್ಗವನ್ನು ಮಾಡುವುದನ್ನು ನಾನು ವಿರೋಧಿಸುತ್ತೇನೆ. ಆದರೆ ಅದೇ ರೀತಿಯಲ್ಲಿ ನೈಸರ್ಗಿಕ ಸಂಪತ್ತನ್ನು ನಾಶ ಮಾಡಿ ರಸ್ತೆ ಮಾರ್ಗಗಳನ್ನು ಕೂಡ ಅಭಿವೃದ್ಧಿ ಮಾಡಬಾರದು. ರೈಲು ಮಾರ್ಗ ಇಲ್ಲವೆಂದರೆ ರಸ್ತೆ ಮಾರ್ಗ ಮಾಡಿ ಸಾವಿರಾರು ವಾಹನಗಳನ್ನು ಓಡಿಸಿ, ಮೋಜುಮಸ್ತಿಗೆ ತಾಣ ಮಾಡಿಕೊಂಡು, ಅಡಿಗಡಿಗೂ ಹೋಟೆಲುಗಳು, ಲಾಡ್ಜುಗಳು, ರೆಸಾರ್ಟುಗಳು, ಇದನ್ನು ನಡೆಸಲು ಮಾಡುವ ಲಾಬಿಗಳು ಇದನ್ನೆಲ್ಲಾ ಗಮನಿಸಿದರೆ, ಸೂಕ್ತ ಕಟ್ಟುನಿಟ್ಟಾದ ಕ್ರಮ ಕೈಗೊಂಡರೆ ರೈಲು ಮಾರ್ಗವೇ ಸೂಕ್ತ ಎನಿಸುತ್ತದೆ. (ಇದನ್ನು ಈಗಾಗಲೇ ಚಾಲ್ತಿಯಲ್ಲಿರುವ ಮೈಸೂರು, ಮಂಗಳೂರು ಮುಂಬೈ ಹಾಗೂ ಇನ್ನಿತರ ಹೆದ್ದಾರಿಗಳನ್ನು ಗಮನದಲ್ಲಿಟ್ಟುಕೊಂಡು ಹೇಳಿರುವುದು)

—ಸುಬ್ರಹ್ಮಣ್ಯ ಕಲ್ಲೂರ, ಬೆಂಗಳೂರು

### ಯುಗಾದಿಯ ನೆನಪು

ಏ.2 ರ ಸಂಚಿಕೆಯ 'ವಿಚಾರ ಲಹರಿ'ಯಲ್ಲಿ ಯುಗಾದಿಸ್ಮೃತಿ ನಮ್ಮ ಬಾಲ್ಯದ ಯುಗಾದಿ ಹಬ್ಬದ ಸಂಭ್ರಮವನ್ನು ಎಳೆ ಎಳೆಯಾಗಿ ನೆನಪಿಸಿಕೊಟ್ಟಿತು. ಆದರೆ ಯುಗಾದಿಯಂದು ನಾವೆಲ್ಲರೂ ಅತ್ಯಂತ ಕುತೂಹಲದಿಂದ ಕಾದು ನೋಡುತ್ತಿದ್ದ ಯುಗಾದಿ ಚಂದಿರನ ಬಗ್ಗೆ ಸೂಚಿಸದಿದ್ದುದು ತುಸು ನಿರಾಸೆಯನ್ನುಂಟುಮಾಡಿತು. ಅಂದು ಸಂಜೆ ಚಂದ್ರದರ್ಶನವಾಗುತ್ತಿದ್ದಂತೆಯೇ ಮನೆಯ ಎಲ್ಲ ಹಿರಿಯರ ಪಾದಗಳನ್ನು ಮುಟ್ಟಿ ನಮಸ್ಕರಿಸುತ್ತಿದ್ದುದನ್ನು ಮರೆಯುವುದುಂಟೇ?

—ಡಾ. ವಿನಯ ಶ್ರೀನಿವಾಸ್. ಶಿವಮೊಗ್ಗ

### ಈಗಿರುವಂತೆಯೇ ಇರಲಿ

ಫೆ. 13ರ ಸಂಚಿಕೆಯಲ್ಲಿ ಓದುಗರೊಬ್ಬರು, 'ಸುಧಾ ಪತ್ರಿಕೆಯ ಕೆಲವು ಪುಟಗಳು ಸಾಮಾಜಿಕ ಮತ್ತು ರಾಜಕೀಯ ವಿಷಯಗಳ ಕುರಿತಾದ ಚರ್ಚೆಗೆ ಮೀಸಲಾಗಲಿ' ಎಂದು ಸಲಹೆ ಕೊಟ್ಟಿದ್ದಾರೆ. ಈ ಕುರಿತಂತೆ ನನ್ನ ಅಭಿಪ್ರಾಯ ಏನೆಂದರೆ, ರಾಜಕೀಯ ವಿಷಯಗಳನ್ನು ಚರ್ಚಿಸಲಿಕ್ಕಾಗಿ ಈಗಾಗಲೇ ಸಾಕಷ್ಟು ಪತ್ರಿಕೆಗಳು ಇವೆ. ಹಾಗಾಗಿ 'ಸುಧಾ' ಪತ್ರಿಕೆಯಲ್ಲಿ ಅದಕ್ಕೆ ಜಾಗ ನೀಡಬೇಕಾದ ಅಗತ್ಯ ಇಲ್ಲ. 'ಸುಧಾ' ಪತ್ರಿಕೆ ಈಗ ಯಾವ ಸ್ವರೂಪದಲ್ಲಿ ಪ್ರಕಟವಾಗುತ್ತಿದೆಯೋ ಅದೇ ಸ್ವರೂಪವನ್ನು ಮುಂದೆಯೂ ಕಾಪಾಡಿಕೊಳ್ಳಲಿ. ಸಾಮಾನ್ಯ ಜನರಿಗೆ ತುಂಬ ಉಪಯುಕ್ತವಾದ ರೀತಿಯಲ್ಲಿ ಇದರ ಸ್ವರೂಪ ಇದೆ.

— ಕೆ.ಎಂ. ಉಡುಪ, ಬೆಂಗಳೂರು

### ಮಹಾಭಾರತದ ಮೂಲ

ಏ. 2ರ 'ನಗೆದಿನ'ದ ವಿಶೇಷ ಸಂಚಿಕೆಯಲ್ಲಿ 'ಮಹತಿ' ಅವರು ಬರೆದ 'ಮಹಾಭಾರತ ರಚಿಸಿದ್ದು ಯಾರು?' ಲೇಖನ ಅದ್ಭುತವಾಗಿ ಮೂಡಿಬಂದಿದೆ. ಪ್ರತಿಯೊಂದು ವಾಕ್ಯವು ಅಳೆದು ತೂಗಿ ಬರೆದಿದ್ದೀರಾ. ಸಂಭಾಷಣೆ ಹೀಗೂ ಇರಬಹುದೇ ಎಂದು ನಕ್ಕಿದ್ದಾಯಿತು.

—ಚಂದನ ಜಿ. ಪಿ.

### ಗಾಲಿಬ್ ಸ್ಮರಣೆ

ಏ. 9ರ ಸಂಚಿಕೆಯಲ್ಲಿ ಚಂದ್ರಶೇಖರ ಹೆಗಡೆ ಅವರು ಬರೆದ 'ಗಾಲಿಬ್' ಕುರಿತ ಲೇಖನ ಬಹಳ ಉಪಯುಕ್ತ ಮತ್ತು ಸಮಯೋಚಿತವಾಗಿತ್ತು. ಕೊರೊನಾ ಸೋಂಕಿನ ಭೀತಿಯಿಂದ ಮನೆ ಸೇರಿರುವ ನಾವುಗಳೆಲ್ಲ ನಿಧಾನವಾಗಿ ಓದಿ ಅರ್ಥ ಮಾಡಿಕೊಳ್ಳುವ ಲೇಖನ ಇದಾಗಿದೆ. ಮಿರ್ಜಾ ಗಾಲಿಬ್‌ನ ಉರ್ದು ದ್ವಿಪದಿಗಳನ್ನು ಸರಳವಾಗಿ ಕನ್ನಡೀಕರಿಸಿ, ಮುಂಬಯಿಯಲ್ಲಿರುವ ಗಾಲಿಬ್‌ನ ಮ್ಯೂರಲ್ ಕಲಾಕೃತಿಗಳನ್ನು ಮುದ್ರಿಸಿರುವುದು ಸ್ಮರಣೀಯ.

—ಎಸ್.ಟಿ. ರಾಮಚಂದ್ರ, ಬೆಂಗಳೂರು

### ಕಥೆಯಲ್ಲ; ಕಟು ವಾಸ್ತವ

ಏ. 9ರ ಸಂಚಿಕೆಯಲ್ಲಿ 'ಕಥೆ' ಎಂಬ ಹಣೆಪಟ್ಟಿಯನ್ನು ಹೊತ್ತು ಪ್ರಕಟವಾಗಿರುವ ವಸುಂಧರಾ ಕೆ.ಎಂ. ಅವರ, 'ಕಣ್ಣ ಪೊರೆ ಕಳಚಿದಾಗ' ನಿಜವಾಗಿಯೂ ಕಲ್ಪನೆಯ ಕಥೆಯಲ್ಲ, ಅದೊಂದು ಕಟುವಾಸ್ತವದ ಕಥನ. ತಮ್ಮ ಯೌವನ ಕಾಲದಲ್ಲಿ ಗೌರವಯುತವಾದ ಬದುಕು ಸಾಗಿಸಿ, ಜೀವನದ ಸಂಧ್ಯಾಕಾಲದಲ್ಲಿ ತಾವು ಸಾಕಿದವರಿಂದಲೇ ಪ್ರಾಣಿಗಳಿಗಿಂತಲೂ ಕೀಳಾಗಿ ಕಡೆಗಣಿಸಲ್ಪಟ್ಟು, ದನದ ಕೊಟ್ಟಿಗೆಯಲ್ಲೇ ಅನ್ನ ನೀರಿಲ್ಲದೆ ನರಳಿ, ಅನಾಥರಂತೆ ಜೀವ ತೊರೆದವರನ್ನು ಕಣ್ಣಾರೆ ಕಂಡು ಮರುಗಿದ್ದೇನೆ. ಮನದಾಳದಲ್ಲಿ ಅಡಗಿದ್ದ ಭಾವನೆಗಳನ್ನು ಮುನ್ನೆಲೆಗೆ ತಂದ 'ಕಣ್ಣ ಪೊರೆ...'ಗೆ ಸ್ವಲ್ಪ ಶಸ್ತ್ರಚಿಕಿತ್ಸೆಯ ಅಗತ್ಯವಿತ್ತು. ಲೇಖಕಿ ವಿನಾಕಾರಣ ಅತಿಯೆನಿಸುವಷ್ಟು ಇಂಗ್ಲಿಷ್ ಪದಗಳನ್ನು/ ವಾಕ್ಯಗಳನ್ನು ಬಳಸಿದ್ದಾರೆ. ಇದು ಬೇಕಿತ್ತೆ?

—ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in